


# ಗರ್ಭಕೋಶದ 3ಡಿ ಶಸ್ತ್ರ ಚಿಕಿತ್ಸೆ

## ಸ್ತ್ರೀ ರೋಗ ಚಿಕಿತ್ಸೆಯಲ್ಲಿ 3ಡಿ ಉದರದರ್ಶಕ ವಿಧಾನ ಬಳಕೆ

ಸ್ತ್ರೀ ರೋಗಗಳ ಸಂಬಂಧ ನಡೆಸುವ ಸರಿಸುಮಾರು ಎಲ್ಲಾ ಶಸ್ತ್ರ ಚಿಕಿತ್ಸೆಯಲ್ಲಿ ಉದರದರ್ಶಕದ ಮುಖೇನ ಕನಿಷ್ಠ ಪ್ರಮಾಣದ ಛೇದಕ (ಇನ್‌ವೇಸಿವ್) ಮಾಡುವ ಕ್ರಿಯೆಯು ಈಗ ಒಂದು ಗುಣಮಟ್ಟದ ಪದ್ಧತಿಯಾಗಿ ರೂಢಿಗೆ ಬಂದಿದೆ.

ಸಾಂಪ್ರದಾಯಿಕ ಸ್ವರೂಪಕ ಉದರದರ್ಶಕ ಶಸ್ತ್ರ ಚಿಕಿತ್ಸೆಯು 2ಡಿ ಕಾಣ್ಕೆಗೆ (ಮೊನೂಕ್ಯುಲರ್ ವಿಷನ್) ಮಾತ್ರ ಸೀಮಿತವಾಗಿರುತ್ತದೆ. ಇದರಲ್ಲಿ ಸಮತಟ್ಟಾದ ಪರದೆ ಇರುತ್ತದೆ. ಇದರ ಮೇಲೆ ಉದರದ ಸಮಸ್ಯೆ ಇರುವ ಆಂಶ ಗೋಚರವಾಗುತ್ತದೆ. ಆಗ ಉದರದರ್ಶಕ ಶಸ್ತ್ರ ಚಿಕಿತ್ಸಕರು ಒಂದು ಮಿತಿಯ ಅಂದಾಜಿನ ಮೇಲೆ (ಸಾಧಾರಣವಾದ ತ್ರಿಮಿತಿ ದರ್ಶನದ ಕ್ಷೀಣತೆಯಲ್ಲಿ) ಶಸ್ತ್ರಕ್ರಿಯೆ ನಡೆಸಬೇಕಾದ ಅನಿವಾರ್ಯತೆ ಇರುತ್ತದೆ.

3ಡಿ ವಿಷನ್, ಕೊಯ್ಯುವಿಕೆ ಹೊಲಿಯುವಿಕೆ ದಾರದ ಗಂಟು ಹಾಕುವಿಕೆ ಮುಂತಾದ ಶಸ್ತ್ರ ಚಿಕಿತ್ಸೆಯ ಹಲವಾರು ವಿಚಾರಗಳಲ್ಲಿ ಶಸ್ತ್ರಚಿಕಿತ್ಸಕರಿಗೆ ಸ್ವತಂತ್ರವಾಗಿ ನೆರವಾಗುತ್ತದೆ. ಆದ ಪ್ರಯುಕ್ತ ಟ್ಯೂಬಲ್ ರೀ-ಅನೆಸ್ಟೋಮೋನಿಸ್, ತೀವ್ರಸ್ವರೂಪದ ಮತ್ತು ಡೀಪ್ ಇನ್‌ಫಿಲ್‌ಟ್ರೇಟಿಂಗ್ ಎಂಡೊಮಿಟ್ರಿ ಯೋಸಿಸ್, ಅಥೇಸಿಯೊಲಿಸಿಸ್, ಮೈಯೋಮ ಬೆಡ್ ಸೂಚರಿಂಗ್, ಕ್ಯಾನ್ಸರ್ ಶಸ್ತ್ರ ಚಿಕಿತ್ಸೆ ಇತ್ಯಾದಿಯಂತಹ ಮುಂಜಾಗ್ರತಾ ಕ್ರಮಗಳ ಸಂಕೀರ್ಣತೆಯನ್ನು ಇದು ಕಡಿಮೆಮಾಡುತ್ತದೆ. ಯಾವುದೇ ರೋಬೋಟಿಕ್ ಕೈಗಳಿಲ್ಲದೆ ಗುಣಮಟ್ಟದ ಉದರದರ್ಶಕಕ್ಕೆ ಅತ್ಯುತ್ತಮ ಸೂತ್ರೀಕರಣದ 3ಡಿ ತಂತ್ರಜ್ಞಾ ಅಳವಡಿಸುವ ಮೂಲಕ ಇದನ್ನು ಮಾಡಬಹುದು. 3ಡಿ ವಿಷನ್ ಒದಗಿಸುವುದರಲ್ಲಿ ರೋಬೋಟಿಕ್‌ನ ಪ್ರಮುಖ ಆನುಕೂಲ ಕಂಡುಬರುವುದರಿಂದ ಇದು ಅತ್ಯಂತ ಮಿತವ್ಯಯಕಾರಿ ಹಾಗೂ ರೋಬೋಟಿಕ್‌ಗೆ ಪರ್ಯಾಯ ಸಾಧನ ಕೂಡ ಆತದೆ.

2ಡಿ ವಿಧಾನವನ್ನು 3ಡಿ ವಿಧಾನಕ್ಕೆ ಉನ್ನತೀಕರಿಸುವ ಕಾರ್ಯವು ಉದರದರ್ಶಕ ಶಸ್ತ್ರ ಚಿಕಿತ್ಸಕರಿಗೆ ಸುಲಭ ಸಾಧ್ಯ ಹಾಗೂ ಮಿತವ್ಯಯಕಾರಿಯೂ ಆತದೆ.

### 3ಡಿ ಶಸ್ತ್ರ ಚಿಕಿತ್ಸೆಯ ಅನುಕೂಲಗಳು

ಈ ವಿಧಾನದಲ್ಲಿ ಅನೇಕ ಅನುಕೂಲಗಳಿವೆ. ಕೆಲವು ಅನುಕೂಲಗಳೇನು ಎಂಬುದನ್ನು ಈಗಾಗಲೇ ಇಲ್ಲಿ ವಿವರಿಸಲಾಗಿದೆ. ಇದರಿಂದ ಶಸ್ತ್ರಚಿಕಿತ್ಸೆಯ ಯಶಸ್ಸಿನ ಉತ್ತಮ ಫಲಿತಾಂಶ ಬರುವುದರ ಜೊತೆಗೆ ಸ್ತ್ರೀಯರು ಗರ್ಭಧರಿಸುವ ಪ್ರಮಾಣವನ್ನು ಹೆಚ್ಚಿಸುತ್ತದೆ. ಒಟ್ಟಾರೆ ಇದರಿಂದ ರೋಗಿಗಳಿಗೆ ಹೆಚ್ಚಿನ ಅನುಕೂಲ ದೊರೆಯುತ್ತದೆ.

## 3ಡಿ ಶಸ್ತ್ರಚಿಕಿತ್ಸೆಯ ವಿಧಾನದಿಂದ ಮಾಡುವ ಶಸ್ತ್ರ ಚಿಕಿತ್ಸೆಗಳು

- ಗರ್ಭಕೋಶ ತೆಗೆದು ಹಾಕಲು
- ಗರ್ಭಕೋಶದಲ್ಲಿನ ಗಡ್ಡೆಗಳನ್ನು ತೆಗೆದು ಹಾಕಲು
- ಅಂಡಾಶಯದ ಸಿಸ್ಟ್ ತೆಗೆದು ಹಾಕಲು
- ಟ್ಯೂಬಲ್ ರಿಕ್ಯಾನಲೈಸೇಷನ್ (ಬೇರ್ಪಡಿಸಿದ್ದ ನಾಳಗಳನ್ನು ಮರು ಜೋಡಣೆ ಮಾಡುವುದು)
- ಕ್ಯಾನ್ಸರ್ ಶಸ್ತ್ರ ಚಿಕಿತ್ಸೆ
- ಬಂಜೆತನ ನಿವಾರಣೆಗೆ ಶಸ್ತ್ರಚಿಕಿತ್ಸೆ

### ಉದರದರ್ಶಕದಲ್ಲಿ 3ಡಿ ಶಸ್ತ್ರ ಚಿಕಿತ್ಸೆ ಅಳವಡಿಕೆಯಿಂದ ಆಗುವ ಉದ್ದೇಶಿತ ಆನುಕೂಲಗಳು ಕೆಳಕಂಡಂತಿರುವವು:

- ಸಂಕೀರ್ಣ ಸವರೂಪದ ಕ್ರಿಯೆಗಳಾದ ಹೊಲಿಗೆ ಹಾಕುವಿಕೆ, ದಾರದ ಗಂಟು ಹಾಕುವಿಕೆ ಸುಲಭವಾಗುವುದು
- ತ್ರಾಸದಾಯಕ ಶಸ್ತ್ರಚಿಕಿತ್ಸೆಗಳನ್ನು ಅತ್ಯಂತ ಸುಲಭವಾಗಿ ಮಾಡಬಹುದು.
- ಛೇಧಕವನ್ನು ಅತ್ಯಂತ ನಿರ್ದಿಷ್ಟವಾಗಿ ಮತ್ತು ನಿಖರವಾಗಿ ನಡೆಸಬಹುದು.
- ಅತ್ಯಂತ ಸೂಕ್ಷ್ಮಸ್ವರೂಪದ ಶಸ್ತ್ರ ಚಿಕಿತ್ಸೆ ನಡೆಸಲು ಅತ್ಯಂತ ಅನುಕೂಲ ತೊಂದರೆಯಿರುವ ಜಾಗವು ಅತಿ ಸ್ಪಷ್ಟವಾಗಿ ಗೋಚರಿಸುತ್ತದೆ.
- ಶಸ್ತ್ರಕ್ರಿಯೆ ಸಮಯ ಕಡಿಮೆಯಾಗುತ್ತದೆ. ಸಂದಿಗ್ಧತೆ ಪ್ರಮಾಣ ಕಡಿಮೆಯಿರುತ್ತದೆ.
- ಅನುಭವಿ ಶಸ್ತ್ರಚಿಕಿತ್ಸಕರ ವಿಶ್ವಾಸವನ್ನು ಹೆಚ್ಚಿಸುವುದು.

ಉತ್ತಮ ಕೌಶಲ್ಯದ ಜೊತೆಗೆ ಈ ಉನ್ನತ ತಂತ್ರಜ್ಞಾನ ಸಮೀಕರಣಗೊಳ್ಳುವುದರಿಂದ ಉತ್ತಮ ಫಲಿತಾಂಶ ಬರುತ್ತದೆ. ಅಂದರೆ ರೋಗಿಗಳಿಗೆ ಹಾಗೂ ವೈದ್ಯರಿಗೆ ಇಬ್ಬರಿಗೂ ಸಂತಸವಾಗುವ ಶಸ್ತ್ರಕ್ರಿಯೆ ಇದರಿಂದ ನೆರವೇರುತ್ತದೆ.


Dr.Ramesh Hospital

## ಡಾ. ರಮೇಶ್ ಆಸ್ಪತ್ರೆ

ಉದರದರ್ಶಕ ಮತ್ತು ಸ್ತ್ರೀರೋಗ ಚಿಕಿತ್ಸೆಗೆ ಹೈಟೆಕ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ

No.6/63, 59ನೇ ಅಡ್ಡರಸ್ತೆ, 4ನೇ ಬ್ಲಾಕ್, ರಾಜಾಜಿನಗರ

ಎಂಟ್ರನ್ಸ್, ಎಂ.ಇ.ಐ. ಪಾಲಿಟೆಕ್ನಿಕ್ ಹತ್ತಿರ, ಬೆಂಗಳೂರು-10. ದೂ.ಸಂಖ್ಯೆ:080 23151873,

Mobile : 99000 31842 email : endoram2006@yahoo.in ,

www.laparoscopicsurgeries.com